# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1051 (1113)

ಉತ್ತರಿಸಬೇಕಾದ ದಿನಾಂಕ : 15.12.2023

ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಛೇರಿಗಳಲ್ಲಿ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹಣ ದುರುಪಯೋಗವಾಗಿರುವ ಪ್ರಕರಣ ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | ಪ್ರಕರಣದ ವಿಚಾರಣೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019 ದಿನಾಂಕ: 29.01.2022 ರಲ್ಲಿ ಶ್ರೀ ಜಿ.ಎಸ್. ಸೋಮಶೇಖರ್, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.(ಪ್ರತಿ ಲಗತ್ತಿಸಿದೆ ಅನುಬಂಧ-1)<br><br>ಪ್ರಕರಣದ ವಿಚಾರಣೆಯಲ್ಲಿ ಜಾರಿ ಮಾಡಲಾದ ದೋಷಾರೋಪಣ ಪಟ್ಟಿಯ ಅನುಬಂಧ-4 ರಲ್ಲಿ ಗುರುತಿಸಿರುವ ಸಾಕ್ಷಿಗಳ ವಿಚಾರಣೆ ನಡೆಸಲು ದಿನಾಂಕವನ್ನು ಪೂರ್ವ ನಿಗದಿ ಮಾಡಿ ಹಾಜರಾಗುವಂತೆ ಸೂಚಿಸಿದಾಗ್ಯೂ ಪದೇ ಪದೇ ಸಾಕ್ಷಿಗಳು ಗೈರು ಹಾಜರಾದ ಕಾರಣ ಇಲಾಖಾ ವಿಚಾರಣೆಯು ವಿಳಂಬವಾಗುತ್ತಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019 ದಿನಾಂಕ: 01.07.2023 ರ ಆದೇಶದಲ್ಲಿ ವಿಚಾರಣಾಧಿಕಾರಿಗಳಿಗೆ Karnataka Departmental Inquiries (Enforcement of Attendence of witnesses, Production of Documents and Miscellaneous provisions) Act 1981ರ ಸೆಕ್ಷನ್ 5 ರಲ್ಲಿ ನಿಗದಿಪಡಿಸಿರುವ ಅಧಿಕಾರ ಚಲಾಯಿಸಲು ಅಧಿಕಾರ ನೀಡಲಾಗಿರುತ್ತದೆ. ಹಾಗಾಗಿ ಪ್ರಕರಣದ ವಿಚಾರಣೆಯು ಪ್ರಗತಿಯಲ್ಲಿರುತ್ತದೆ(ಪ್ರತಿ ಲಗತ್ತಿಸಿದೆ ಅನುಬಂಧ-2).<br><br>ಮುಂದುವರೆದು, ಸದರಿ ಹಗರಣದ ತನಿಖೆಯನ್ನು ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಒಇ 65 ಸಿಒಡಿ 2020, ದಿನಾಂಕ: 23.12.2020 ರಲ್ಲಿ ಸಿ.ಓ.ಡಿ.ಯವರಿಗೆ ವಹಿಸಲಾಗಿದೆ (ಪ್ರತಿ ಲಗತ್ತಿಸಿದೆ ಅನುಬಂಧ-3 ಮತ್ತು 4). |

| | | |
|---|---|---|
| ಆ) | ಹಣ ದುರುಪಯೋಗ ಪ್ರಕರಣದಲ್ಲಿ ಹೆಸರಿಸಲಾದ ಅಧಿಕಾರಿ ಮತ್ತು ನೌಕರರ ವಿರುದ್ಧ ನಡೆಯುತ್ತಿರುವ ಇಲಾಖಾ ವಿಚಾರಣೆ ಪೂರ್ಣಗೊಂಡಿದೆಯೇ; ವಿಚಾರಣೆ ಬಾಕಿಯಿದ್ದಲ್ಲಿ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಇಲಾಖಾ ವಿಚಾರಣೆ ಪೂರ್ಣಗೊಂಡಿರುವುದಿಲ್ಲ.<br><br>ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳಾದ ಶ್ರೀ ಜಿ.ಎಸ್. ಸೋಮಶೇಖರ್, ನಿವೃತ್ತ ನ್ಯಾಯಾಧೀಶರು ಇವರಿಗೆ ಮೇಲ್ಕಂಡಂತೆ ದಿನಾಂಕ: 01.07.2023 ರ ಆದೇಶದಲ್ಲಿ ಸಾಕ್ಷಿಗಳಿಂದ ಹೇಳಿಕೆ / ದಾಖಲೆಗಳನ್ನು ಪಡೆಯುವ ಉದ್ದೇಶಕ್ಕಾಗಿ ವಿಶೇಷ ಅಧಿಕಾರ ನೀಡಲಾಗಿದ್ದು, ಸದರಿಯವರಿಂದ ವರದಿ ಸ್ವೀಕೃತವಾದ ಕೂಡಲೇ ಕ್ರಮ ಕೈಗೊಳ್ಳಲಾಗುವುದು. |
| ಇ) | ದುರುಪಯೋಗವಾಗಿರುವ ಹಣವನ್ನು ಬ್ಯಾಂಕ್ ಗಳಿಂದ ಹಿಂಪಡೆಯುವ ದಿಸೆಯಲ್ಲಿ ಸರ್ಕಾರ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ದುರುಪಯೋಗವಾಗಿರುವ ಹಣವನ್ನು ಬ್ಯಾಂಕ್‌ಗಳಿಂದ ಹಿಂಪಡೆಯುವ ಸಲುವಾಗಿ ಗ್ರಾಹಕರ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಅರ್ಜಿ ದಾಖಲಿಸಲು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ. |
| ಈ) | ಹಣ ದುರುಪಯೋಗಕ್ಕೆ ಕಾರಣರಾಗಿರುವುದು ಗಂಭೀರ ಸ್ವರೂಪದ ಕ್ರಿಮಿನಲ್ ದುರ್ನಡತೆ ಆಗಿರುವುದರಿಂದ ಪ್ರಸ್ತುತ ಪ್ರಕರಣದಲ್ಲಿ ಅಧಿಕಾರಿ / ನೌಕರರು ಹಾಗೂ ಬ್ಯಾಂಕ್ ಸಿಬ್ಬಂದಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು; | ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಉ) | ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳಿಗೆ ಕೆಲವು ದಾಖಲೆಗಳನ್ನು ನೀಡಲು ಅಧಿಕಾರಿ / ನೌಕರರು ನಿರಾಕರಿಸುವ / ಅಸಹಕಾರ ತೋರುವ / ವಿಳಂಬ ಮಾಡುತ್ತಿದ್ದಾರೆ ಎನ್ನುವ ಆರೋಪ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? | ತನಿಖೆಗೆ ಸಂಬಂಧಿಸಿದ ಮಾಹಿತಿ / ದಾಖಲೆಗಳನ್ನು ಸಿಐಡಿ ಅಧಿಕಾರಿಗಳಿಗೆ ಈಗಾಗಲೇ ಒದಗಿಸಲಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. |

**ಗ್ರಾಅಪ 363 ಜಡ್‌ಪಿಎ 2023**

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

1359

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯಲ್ಲಿ ಹಣ ದುರುಪಯೋಗದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರ ವಿರುದ್ಧ ಇಲಾಖಾ ವಿಚಾರಣೆ – ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಿಸುವ ಬಗ್ಗೆ

**ಓದಲಾಗಿದೆ:**
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಇವರ ಪತ್ರ ಸಂಖ್ಯೆ: ಉಕಾ-1/ಸಿ3/ಇಂಜಿ/ಸಿಬ್ಬಂದಿ/ 40/19-20, ದಿ:06.12.2019
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ:13.01.2021
3. ಸರ್ಕಾರದ ಕಾರಣ ಕೇಳುವ ನೋಟಿಸಿನೊಂದಿಗೆ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿದ ದಿನಾಂಕ: ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ:13.01.2021
4. ಆಪಾದಿತರಾದ ಶ್ರೀ ಪ್ರಕಾಶ್.ಜಿ.ಪವಾರ, ಶ್ರೀ ಎಸ್.ಕುಮಾರ್, ಶ್ರೀ ಎಸ್.ವಿ.ಪದ್ಮನಾಭ & ಶ್ರೀ ರಾಮಕೃಷ್ಣ ಇವರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳ ದಿನಾಂಕ: 11.02.2021, 23.03.2021, 12.04.2021 & 28.05.2021

******

**<u>ಪ್ರಸ್ತಾವನೆ:</u>**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ:06.12.2019ರ ಪತ್ರದಲ್ಲಿ ಪಂ.ರಾ.ಇಂ. ವಿಭಾಗ, ಮಂಡ್ಯ ಕಛೇರಿಯಲ್ಲಿ 2010-11 ರಿಂದ 2019ರ ಅವಧಿಯಲ್ಲಿ ಹಲವಾರು ಆರ್ಥಿಕ ಅಕ್ರಮಗಳು ಹಾಗೂ ಹಣ ದುರುಪಯೋಗ ಸೇರಿದಂತೆ ಕರ್ತವ್ಯಲೋಪ / ದುರ್ನಡತೆ ಎಸಗಿರುವ ಪ್ರಕರಣದಲ್ಲಿ ಭಾಗಿಯಾಗಿರುವ ಒಟ್ಟು 10 ಜನ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯಲ್ಲಿ ಬೃಹತ್ ಪ್ರಮಾಣದ ಹಣ ದುರುಪಯೋಗವಾಗಿದ್ದು, ಹಲವಾರು ಬ್ಯಾಂಕ್‌ಗಳಿಗೆ ನೀಡಿರುವ ಚೆಕ್‌ಗಳಲ್ಲಿ ಕಾರ್ಯಪಾಲಕ ಅಭಿಯಂತರರು ಬೃಹತ್ ಪ್ರಮಾಣದ ಹಣ ಪಡೆದಿರುವುದು, ಬ್ಯಾಂಕ್ ವ್ಯವಹಾರದಲ್ಲಿ ಚಾಲ್ತಿಯಲ್ಲಿರುವ ಆದೇಶಗಳಿಗೆ ವಿರುದ್ಧವಾಗಿ ವಿಭಾಗ ಕಛೇರಿಯ ಗ್ರೂಪ್ ಡಿ ನೌಕರರ ವೈಯಕ್ತಿಕ ಖಾತೆಗೆ ಹಣ ಜಮಾ ಆಗಿರುವುದು, ನಗದು ಪುಸ್ತಕ ನಿರ್ವಹಿಸದಿರುವುದು, ಹಲವಾರು ಬ್ಯಾಂಕ್ ಖಾತೆಗಳ ಮಾಹಿತಿಯನ್ನು ವಿಭಾಗ ಕಛೇರಿಯಲ್ಲಿ ನಿರ್ವಹಿಸದಿರುವುದು ಇತ್ಯಾದಿ ಗಂಭೀರ ಸ್ವರೂಪದ ಕರ್ತವ್ಯ ಲೋಪ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ನಿರ್ಧರಿಸಿ ಹಾಗೂ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಪ್ರಕಾಶ್ ಗೋಪಾಲ ಕೃಷ್ಣ ಪವ್ಹಾರ, ಅಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ ಇವರು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು 214ನೇ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಕರ್ನಾಟಕ ನಾಗರಿಕ ಸೇವಾ (ವನಿಮೇ) ನಿಯಮಗಳು 1957 ರ ನಿಯಮ 11 ರಂತೆ ಇಲಾಖಾ ವಿಚಾರಣೆಯನ್ನು ಜರುಗಿಸಲು ಮೇಲೆ ಓದಲಾದ ಕ್ರಮಸಂಖ್ಯೆ (3) ರಂತೆ ದೋಷಾರೋಪಣಾ ಪಟ್ಟಿಯೊಂದಿಗೆ ಕಾರಣ ಕೇಳುವ ನೋಟಿಸ್ ಅನ್ನು ಜಾರಿ ಮಾಡಲಾಗಿತ್ತು:-

..2

1. ಶ್ರೀ ಪ್ರಕಾಶ್ ಗೋಪಾಲ ಕೃಷ್ಣ ಪವ್ವಾರ, ಹಿಂದಿನ ಕಾ.ಇಂ.,(ನಿವೃತ್ತ), ಪಂ.ರಾ.ಇಂ. ವಿಭಾಗ, ಮಂಡ್ಯ.
2. ಶ್ರೀ ರಾಮಕೃಷ್ಣ, ಹಿಂದಿನ ಪ್ರಭಾರಿ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
3. ಶ್ರೀ ಚಂದ್ರಹಾಸ, ಹಿಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
4. ಶ್ರೀ ಎಸ್.ವಿ.ಪದ್ಮನಾಭ, ಅಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
5. ಶ್ರೀ ಎಸ್.ಕುಮಾರ್, ಅಂದಿನ ಕಾ.ಇಂ., ಪಂ
6. .ರಾ.ಇಂ. ವಿಭಾಗ, ಮಂಡ್ಯ.
7. ಶ್ರೀ ಬಿ.ಆರ್.ಚಂದ್ರಶೇಖರ್, ಹಿಂದಿನ ಪ್ರ.ದ.ಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
8. ಶ್ರೀ ಟಿ.ಲಕ್ಷ್ಮೀಕಾಂತ, ಹಿಂದಿನ ದ್ವಿ.ದ.ಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
9. ಶ್ರೀ ಆರ್.ರಾಜು, ಹಿಂದಿನ ಲೆಕ್ಕಾಧೀಕ್ಷಕ, ಪಂ.ರಾ.ಇಂ. ವಿಭಾಗ, ಮಂಡ್ಯ.
10. ಶ್ರೀ ಬಿ.ರಮೇಶ್, ಹಿಂದಿನ ಪ್ರ.ದ.ಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
11. ಶ್ರೀ ವಿ.ಪಿ.ಆನಂದ ಕುಮಾರ್, ಹಿಂದಿನ ಲೆಕ್ಕಾಧೀಕ್ಷಕ, ಪಂ.ರಾ.ಇಂ. ವಿಭಾಗ, ಮಂಡ್ಯ.

ದೋಷಾರೋಪಣಾ ಪಟ್ಟಿಯೊಂದಿಗೆ ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟಿಸ್‌ಗೆ ಎದುರಾಗಿ ಮೇಲ್ಕಂಡ ಅಧಿಕಾರಿ / ನೌಕರರುಗಳ ಪೈಕಿ ಶ್ರೀ ಪ್ರಕಾಶ್.ಜಿ.ಪವಾರ, ಹಿಂದಿನ ಕಾ.ಇಂ.(ನಿವೃತ್ತ), ಶ್ರೀ ರಾಮಕೃಷ್ಣ, ಹಿಂದಿನ ಪ್ರಭಾರಿ ಕಾ.ಇಂ., ಶ್ರೀ ಎಸ್.ವಿ.ಪದ್ಮನಾಭ, ಕಾ.ಇಂ. ಮತ್ತು ಶ್ರೀ ಎಸ್.ಕುಮಾರ್, ಹಿಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ ಇವರುಗಳು ಮಾತ್ರ ಮೇಲೆ ಓದಲಾದ ಕ್ರಮ ಸಂಖ್ಯೆ (4)ರಂತೆ ಲಿಖಿತ ಹೇಳಿಕೆ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆಯುತ್ತಾ, ತಮ್ಮನ್ನು ಪ್ರಕರಣದಿಂದ ದೋಷಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಆಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ್ದು, ಆಪಾದಿತರುಗಳು ತಮ್ಮ ಹೇಳಿಕೆಗಳಿಗೆ ಪೂರಕವಾಗಿ ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆಯಲು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ ಸದರಿಯವರ ಲಿಖಿತ ಹೇಳಿಕೆಗಳನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಇನ್ನುಳಿದ ಆರೋಪಿತರುಗಳಿಗೆ ಅನುಬಂಧ-3ರಲ್ಲಿನ ದಾಖಲೆಗಳನ್ನು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಮಂಡ್ಯ ರವರು ಒದಗಿಸಿದ್ದರೂ ಸಹ ತಮಗೆ ದಾಖಲೆಗಳನ್ನು ನೀಡಿಲ್ಲವೆಂದು ತಿಳಿಸಿ ಸದರಿ ದಾಖಲೆಗಳನ್ನು ಒದಗಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಆದರೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಮಂಡ್ಯ ರವರು ಆಪಾದಿತರುಗಳಿಗೆ ಅನುಬಂಧ-3ರಲ್ಲಿನ ದಾಖಲೆಗಳನ್ನು ಕಳುಹಿಸಿ, ಅವರುಗಳಿಂದ ಪಡೆದ ಸ್ವೀಕೃತಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಹಾಗಾಗಿ ಉಳಿದ ಆರೋಪಿತರುಗಳ ಪ್ರತಿವಾದ ಏನೂ ಇಲ್ಲವೆಂದು ಭಾವಿಸಲಾಗಿದೆ.

ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಇವರು ಸಲ್ಲಿಸಿರುವ ವರದಿಯಲ್ಲಿ ತಿಳಿಸಿರುವಂತೆ, ಪಂ.ರಾ.ಇಂ. ವಿಭಾಗ, ಮಂಡ್ಯ ಕಛೇರಿಯಲ್ಲಿ ಬೃಹತ್ ಪ್ರಮಾಣದ ಹಣ ದುರುಪಯೋಗವಾಗಿದ್ದು, ಕೆಲವು ಆಪಾದಿತರುಗಳು ಕಾರಣ ಕೇಳುವ ನೋಟಿಸ್‌ಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೆ ಕೆಲವು ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳಿಗೆ ಪೂರಕವಾದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಈ ಪ್ರಕರಣದ ಕುರಿತು ಸತ್ಯಾಸತ್ಯತೆಯನ್ನು ತಿಳಿಯಲು ವಿಚಾರಣಾಧಿಕಾರಿಯವರನ್ನು ನೇಮಿಸಿ, ವಿಚಾರಣೆ ನಡೆಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ:-

1357



**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019,**
**ಬೆಂಗಳೂರು, ದಿನಾಂಕ: 29.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ದಿನಾಂಕ:13.01.2021 ರಂದು ಕಾರಣ ಕೇಳುವ ನೋಟಿಸಿನೊಂದಿಗೆ ಜಾರಿ ಮಾಡಲಾದ ದೋಷಾರೋಪಣಾ ಪಟ್ಟಿಯಲ್ಲಿ ಮಾಡಿರುವ ಆರೋಪಗಳ ಸಂಬಂಧ, ಸದರಿಯವರುಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ವಿಧಿ ವಿಧಾನಗಳನ್ನು ಅನುಸರಿಸಿ ವಿಚಾರಣೆ ನಡೆಸಲು ಶ್ರೀ ಜಿ.ಎಸ್.ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅದೇ ನಿಯಮಗಳ 11 (5) (ಸಿ) ರ ಪ್ರಕಾರ ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ಇವರನ್ನು ಮಂಡನಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿದೆ.

1. ಶ್ರೀ ಪ್ರಕಾಶ್ ಗೋಪಾಲ ಕೃಷ್ಣ ಪವ್ಹಾರ, ಹಿಂದಿನ ಕಾ.ಇಂ.,(ನಿವೃತ್ತ), ಪಂ.ರಾ.ಇಂ. ವಿಭಾಗ, ಮಂಡ್ಯ.
2. ಶ್ರೀ ರಾಮಕೃಷ್ಣ, ಹಿಂದಿನ ಪ್ರಭಾರಿ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
3. ಶ್ರೀ ಚಂದ್ರಹಾಸ, ಹಿಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
4. ಶ್ರೀ ಎಸ್.ವಿ.ಪದ್ಮನಾಭ, ಅಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
5. ಶ್ರೀ ಎಸ್.ಕುಮಾರ್, ಅಂದಿನ ಕಾ.ಇಂ., ಪಂ.ರಾ.ಇಂ. ವಿಭಾಗ, ಮಂಡ್ಯ.
6. ಶ್ರೀ ಬಿ.ಆರ್.ಚಂದ್ರಶೇಖರ್, ಹಿಂದಿನ ಪ್ರ.ದ.ಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
7. ಶ್ರೀ ಟಿ.ಲಕ್ಷ್ಮೀಕಾಂತ, ಹಿಂದಿನ ದ್ವಿ.ದ.ಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
8. ಶ್ರೀ ಆರ್.ರಾಜು, ಹಿಂದಿನ ಲೆಕ್ಕಾಧೀಕ್ಷಕ, ಪಂ.ರಾ.ಇಂ. ವಿಭಾಗ, ಮಂಡ್ಯ.
9. ಶ್ರೀ ಬಿ.ರಮೇಶ್, ಹಿಂದಿನ ಪ್ರ.ದ.ಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
10. ಶ್ರೀ ವಿ.ಪಿ.ಆನಂದ ಕುಮಾರ್, ಹಿಂದಿನ ಲೆಕ್ಕಾಧೀಕ್ಷಕ, ಪಂ.ರಾ.ಇಂ. ವಿಭಾಗ, ಮಂಡ್ಯ.

ವಿಚಾರಣಾಧಿಕಾರಿಯವರು ಈ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 1957 ರ ನಿಯಮ 11 ರಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನ ಅನುಸರಿಸಿ ವಿಚಾರಣೆ ಮುಗಿಸಿ ವರದಿಯನ್ನು ಅವಶ್ಯಕ ದಾಖಲೆಗಳೊಂದಿಗೆ ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಇಲಾಖಾ ವಿಚಾರಣೆಗೆ ಅವಶ್ಯವಿರುವ ಸ್ಥಳಾವಕಾಶ, ಲೇಖನ ಸಾಮಾಗ್ರಿ, ಸಿಬ್ಬಂದಿ ವ್ಯವಸ್ಥೆಯನ್ನು ಕಲ್ಪಿಸುವಂತೆ ಮುಖ್ಯ ಇಂಜಿನಿಯರ್, ಪಂ.ರಾ.ಇಂ. ಇಲಾಖೆ, ಬೆಂಗಳೂರು ಇವರಿಗೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

29/1/22

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

29/01/2022

**ಇವರಿಗೆ:-**

1. ಮಹಾಲೇಖಪಾಲರು, (ಆ ,ಮತ್ತು ಇ) ಕರ್ನಾಟಕ, ಬೆಂಗಳೂರು

..4

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದ್ ರಾವ್ ಸರ್ಕಲ್, ಬೆಂಗಳೂರು
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ.
6. ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ, ವಿಭಾಗ, ಮಂಡ್ಯ.
7. ಶ್ರೀ ಜಿ.ಎಸ್.ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ನಂ.1327, 11ನೇ ಮುಖ್ಯ ರಸ್ತೆ, ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ. ಪೋಸ್ಟ್, ಬೆಂಗಳೂರು-560 065. (ಮೊಬೈಲ್ ಸಂ:949162238)
8. ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.
9. ಅಧೀಕ್ಷಕ ಇಂಜಿನಿಯರ್, ಪಂ.ರಾ.ಇಂ. ವೃತ್ತ, ಮೈಸೂರು.
10. ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ(ಸೇವೆಗಳು-ಎ,ಬಿ &ಸಿ)
12. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
13. ಗ್ರಾ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
14. ಕಂಪ್ಯೂಟರ್ ಸೆಲ್ / ಹೆಚ್ಚುವರಿ ಪ್ರತಿ / ರಕ್ಷಾ ಕಡತ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯಲ್ಲಿ ಹಣ ದುರುಪಯೋಗ ಆರೋಪದ ಕುರಿತು ಇಲಾಖಾ ವಿಚಾರಣೆ- ಇಲಾಖಾ ವಿಚಾರಣೆಯಲ್ಲಿ ಸಾಕ್ಷಿಗಳ / ದಾಖಲೆಗಳ ಹಾಜರಾತಿಪಡಿಸುವ ಸಂಬಂಧ ವಿಚಾರಣಾಧಿಕಾರಿಯವರಾದ ಶ್ರೀ ಜಿ.ಎಸ್.ಸೋಮಶೇಖರ್ ಇವರಿಗೆ Karnataka Departmental Inquiries(Enforcement of Attendence of witnesses, Production of Documents and Miscellaneous provisions) Act **1981ರ ಸೆಕ್ಷನ್ 5** ರಲ್ಲಿ ನಿಗದಿಪಡಿಸಿರುವ ಅಧಿಕಾರ ಚಲಾಯಿಸಲು ಅಧಿಕಾರ ನೀಡುವ ಬಗ್ಗೆ ಆದೇಶ.

**ಓದಲಾಗಿದೆ:**

1. ಸರ್ಕಾರದ ಕಾರಣ ಕೇಳುವ ನೋಟಿಸ್‌ನೊಂದಿಗೆ ದೋಷಾರೋಪಣಾ ಪಟ್ಟಿ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ:13.01.2021.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ: 29.01.2022.
3. ಮಂಡನಾಧಿಕಾರಿಗಳ ಪತ್ರ ಸಂಖ್ಯೆ:364, ದಿನಾಂಕ: 20.07.2022.

* * * *

**ಪ್ರಸ್ತಾವನೆ :**

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯಲ್ಲಿನ ಹಣ ದುರುಪಯೋಗ ಆರೋಪಗಳಿಗೆ ಸಂಬಂಧಿಸಿದಂತೆ, ಶ್ರೀ ಪ್ರಕಾಶ್ ಗೋಪಾಲಕೃಷ್ಣ ಪವಾರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಮತ್ತು ಇತರೆ 9 ಮಂದಿ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ದಿನಾಂಕ:29.01.2022ರ ಆದೇಶದಲ್ಲಿ ಶ್ರೀ ಜಿ.ಎಸ್.ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ಅದೇ ರೀತಿ ಶಿಸ್ತು ಪ್ರಾಧಿಕಾರದ ಪರವಾಗಿ ದಾಖಲೆಗಳನ್ನು ಹಾಜರುಪಡಿಸಿ, ವಾದ ಮಂಡಿಸಲು ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ಇವರನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

ಮಂಡನಾಧಿಕಾರಿಗಳು ದಿನಾಂಕ:**18.03.2023** ರಂದು ಸರ್ಕಾರಕ್ಕೆ ಪತ್ರ ಬರೆದು, ವಿಚಾರಣೆಗೆ ಅನುಬಂಧ-4 ರಲ್ಲಿ ಗುರುತಿಸಿರುವ ಸಾಕ್ಷಿಗಳ ವಿಚಾರಣೆಯನ್ನು ನಡೆಸಲು ದಿನಾಂಕವನ್ನು ಪೂರ್ವನಿಗದಿ ಮಾಡಿ ಅದರ ಮಾಹಿತಿಯನ್ನು ಸದರಿಯವರುಗಳಿಗೆ ನೀಡಿದರೂ ಸಹ ಪದೇ ಪದೇ ಗೈರು ಹಾಜರಾಗಿ ವಿಚಾರಣೆಯಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದಾರೆಂದು, ಇದರಿಂದ ವಿಚಾರಣೆಯನ್ನು ಮುಂದುವರಿಸಿಕೊಂಡು ಹೋಗಲು ತೊಂದರೆಯಾಗಿರುತ್ತದೆ ಎಂದು ತಿಳಿಸಿ, ಅನುಬಂಧ-4 ರಲ್ಲಿ ಇರುವ ಸಾಕ್ಷಿಗಳಿಗೆ ಸರ್ಕಾರದ ಹಂತದಲ್ಲಿ ಸೂಕ್ತ ಸೂಚನೆಯನ್ನು ನೀಡುವಂತೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರವು ಇಲಾಖಾ ವಿಚಾರಣೆಯಲ್ಲಿ ಸಾಕ್ಷಿಗಳ ಹಾಜರಾತಿ ಹಾಗೂ ದಾಖಲೆಗಳ ಪರಿಶೋಧನೆ, ಹಾಜರುಪಡಿಸುವಿಕೆಗೆ ಸಂಬಂಧಿಸಿದಂತೆ Karnataka Departmental Inquiries (Enforcement of Attendence of witnesses, Production of Documents and Miscellaneous provision)Act 1981 ನ್ನು ಜಾರಿಗೆ ತಂದಿರುತ್ತದೆ.

...2

ಅದರಂತೆ, ಇಲಾಖಾ ವಿಚಾರಣೆಯಲ್ಲಿ ಸಾಕ್ಷಿಗಳ ಹಾಜರಾತಿ ಹಾಗೂ ದಾಖಲೆಗಳ ಪರಿಶೋಧನೆ, ಹಾಜರುಪಡಿಸುವಿಕೆಗೆ ಸಂಬಂಧಿಸಿದಂತೆ, ಸದರಿ ಕಾಯ್ದೆಯ ಸೆಕ್ಷನ್ 5ರಲ್ಲಿ ನಿಗದಿಪಡಿಸಿರುವ ಅಧಿಕಾರಗಳನ್ನು ಚಲಾಯಿಸಲು ವಿಚಾರಣಾಧಿಕಾರಿಗಳಿಗೆ ಸದರಿ ಕಾಯ್ದೆಯ ಸೆಕ್ಷನ್ 4 ರಡಿ ಅಧಿಕಾರ ಪ್ರತ್ಯಾಯೋಜಿಸಲು ಸರ್ಕಾರವು ಅಧಿಕಾರ ಹೊಂದಿರುತ್ತದೆ.

ಆದ್ದರಿಂದ, ಶ್ರೀ ಜಿ.ಎಸ್.ಸೋಮಶೇಖರ್, ವಿಚಾರಣಾಧಿಕಾರಿಗಳು ಇವರಿಗೆ ಪ್ರಸಕ್ತ ಇಲಾಖಾ ವಿಚಾರಣೆಯಲ್ಲಿನ ಆಪಾದಿತರುಗಳ ವಿರುದ್ಧ ಮೇಲೆ ಓದಲಾದ ಕ್ರಮಾಂಕ (1) ರಲ್ಲಿ ಜಾರಿ ಮಾಡಿದ ಆರೋಪ ಪಟ್ಟಿಯ ಅನುಬಂಧ-3 ರಲ್ಲಿ ಗುರುತಿಸಿರುವ ದಾಖಲೆಗಳು ಹಾಗೂ ಅನುಬಂಧ-4 ರಲ್ಲಿ ಗುರುತಿಸಿರುವ ಸಾಕ್ಷಿಗಳನ್ನು ವಿಚಾರಣೆಗೆ ಹಾಜರುಪಡಿಸಲು ಹಾಗೂ ಅವರಿಂದ ಹೇಳಿಕೆ / ದಾಖಲೆಗಳನ್ನು ಪಡೆಯುವ ಉದ್ದೇಶಕ್ಕಾಗಿ, ಅವರ ವಿರುದ್ಧ Karnataka Departmental Inquiries (Enforcement of Attendence of witnesses, Production of Documents and Miscellaneous provision) Act 1981ರ **ಸೆಕ್ಷನ್ 5**ರಲ್ಲಿ ನಿಗದಿಪಡಿಸಿರುವ ಅಧಿಕಾರಗಳನ್ನು ಚಲಾಯಿಸಲು ಸದರಿ ಕಾಯ್ದೆಯ ಸೆಕ್ಷನ್ 4ರ ಅನುಸಾರ ಅಧಿಕಾರ ನೀಡಲು ಉದ್ದೇಶಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 101 ಇಎನ್‌ಕ್ಯೂ 2019,**
**ಬೆಂಗಳೂರು, ದಿನಾಂಕ: 01.07.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಪ್ರಕರಣದಲ್ಲಿ ಒಳಗೊಂಡಿರುವ ಆರೋಪಿತರುಗಳಿಗೆ ದಿನಾಂಕ:**13.01.2021** ರಂದು ಜಾರಿ ಮಾಡಿರುವ ಆರೋಪಪಟ್ಟಿ ಅನುಬಂಧ-1 ಮತ್ತು 2 ರಲ್ಲಿನ ಆರೋಪಗಳ ಕುರಿತು ಅನುಬಂಧ-3ರಲ್ಲಿ ಗುರುತಿಸಿರುವ ದಾಖಲೆಗಳು ಹಾಗೂ ಅನುಬಂಧ-4 ರಲ್ಲಿ ಗುರುತಿಸಿರುವ ಸಾಕ್ಷಿಗಳಿಂದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಅವರಿಂದ ಹೇಳಿಕೆ / ದಾಖಲೆಗಳನ್ನು ಪಡೆಯುವ ಉದ್ದೇಶಕ್ಕಾಗಿ, ಹಾಜರಾತಿಗೆ ಒತ್ತಾಯಪಡಿಸಲು ಅವರುಗಳ ವಿರುದ್ಧ Karnataka Departmental Inquiries (Enforcement of Attendence of witnesses, Production of Documents and Miscellaneous provision) Act 1981ರ ಸೆಕ್ಷನ್ 5 ರಲ್ಲಿ ನಿಗದಿಪಡಿಸಿರುವ ಅಧಿಕಾರಗಳನ್ನು ಚಲಾಯಿಸಲು ಸದರಿ ಕಾಯ್ದೆಯ ಸೆಕ್ಷನ್ 4ರ ಅನುಸಾರ ಶ್ರೀ ಜಿ.ಎಸ್.ಸೋಮಶೇಖರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರಿಗೆ ಅಧಿಕಾರ ನೀಡಿ, ಆದೇಶಿಸಿದೆ.

ವಿಚಾರಣಾಧಿಕಾರಿಗಳು, ಕೂಡಲೇ ಈ ಆದೇಶದಡಿ ಲಭ್ಯವಾದ ಅಧಿಕಾರವನ್ನು ಬಳಸಿಕೊಂಡ ದಾಖಲೆಗಳು ಹಾಗೂ ಸಾಕ್ಷಿಗಳನ್ನು ವಿಚಾರಣೆಗೆ ಹಾಜರುಪಡಿಸಲು ಕಾನೂನುಗಳಿಗನುಗುಣವಾಗಿ ಕ್ರಮ ಕೈಗೊಂಡು ಅವರಿಂದ ಹೇಳಿಕೆ ಪಡೆಯುವುದರೊಂದಿಗೆ ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಉಪಬಂಧಗಳಡಿ ಇಲಾಖಾ ವಿಚಾರಣೆ ಕೈಗೊಂಡು, ಎರಡು ತಿಂಗಳ ಒಳಗೆ ವಿಚಾರಣಾ ವರದಿ ಸಲ್ಲಿಸುವಂತೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

01/7/23

**(ರಘುನಾಥಗೌಡ ಎಸ್. ಪಾಟೀಲ)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
01/07/2023

**ಇವರಿಗೆ :**

1. ಮಹಾಲೇಖಪಾಲರು (ಎ ಮತ್ತು ಇ,) ಕರ್ನಾಟಕ, ಬೆಂಗಳೂರು.

...3

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ.
3. ಶ್ರೀ ಜಿ.ಎಸ್.ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ನಂ.1327, 11ನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ ಪೋಸ್ಟ್, ಬೆಂಗಳೂರು-560 065, ಮೊ.ಸಂ. 949162238.
4. ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.
5. ಆರೋಪಿತ ಅಧಿಕಾರಿ/ನೌಕರರಿಗೆ ಮತ್ತು ಆರೋಪ ಪಟ್ಟಿಯ ಅನುಬಂಧ-4 ರಲ್ಲಿನ ಸಾಕ್ಷಿದಾರರಿಗೆ (ಶ್ರೀ ಪಂಪಾಪತಿ, ಕಾರ್ಯಪಾಲಕ ಇಂಜಿನಿಯರ್ ಇವರ ಮುಖಾಂತರ).
6. ಶಾಖಾ ರಕ್ಷಾಕಡತ / ಹೆಚ್ಚುವರಿ ಪ್ರತಿ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
8. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಸಹಾಯಕರು.